ತೆಗೆದುಕೊಳ್ಳಲಾಗುವುದು. ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ಸರ್ಕಾರದ ಪರಿಶೀಲನೆಯಲ್ಲಿದೆ.

ಮಂಡ್ಯ ನಗರ ಪುರಸಭೆಗೆ ರಸ್ತೆ ನಿರ್ಮಾಣ ಮುಂತಾದ ಅಭಿವೃದ್ಧಿ ಕಾರ್ಯಕ್ಕೆ ವಿವೇಚನಾತ್ಮಕ ಅನುದಾನದಿಂದ ಹಣ ಬಿಡುಗಡೆ ಮಾಡಲು ಸರ್ಕಾರದ ಪರಿಶೀಲನೆಯಲ್ಲಿದೆ.

18) ಕೊಪ್ಪಳವನ್ನು ಜಿಲ್ಲಾ ಕೇಂದ್ರ ಮಾಡಬೇಕೆಂದು ಸರದಿ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ.

ಶ್ರೀ ದಿವಟರ ಮಲ್ಲಿಕಾರ್ಜುನ ಬಸಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೇ, ಕಳೆದ 25 ದಿವಸಗಳಿಂದ ಕೊಪ್ಪಳದಲ್ಲಿ ಸರದಿ ಉಪವಾಸ ಸತ್ಯಾಗ್ರಹ ಕೊಪ್ಪಳವನ್ನು ಜಿಲ್ಲಾಕೇಂದ್ರ ಮಾಡಬೇಕೆಂದು ಒತ್ತಾಯಿಸಲು ನಡೆದಿದೆ. ಸಚಿವ ಸಂಪುಟದ ಉಪ ಸಮಿತಿ 4 ಜಿಲ್ಲೆಗಳನ್ನು ಮಾಡಲು ಶಿಫಾರಸ್ಸು ಮಾಡಿರುವುದಾಗಿ ಉಳಿದಿದೆ. ಈ ನಾಲ್ಕರಲ್ಲಿ ಕೊಪ್ಪಳ ಇಲ್ಲದೆ ಇರುವುದಕ್ಕೆ ವಿವಂಚನೆಗೊಂಡ ಈ ಭಾಗದ ಸರ್ವಪಕ್ಷಗಳ ಮುಖಂಡರು ವಿವಿಧ ಸಂಘಸಂಸ್ಥೆಗಳು ಹಾಗೂ ಸಾಹಿತಿ ಕಲಾವಿದರ ಬಳಗ ಸರ್ಕಾರದ ಗಮನ ಸೆಳೆಯಲು ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ಇದುವರೆಗೆ ಈ ನ್ಯಾಯಯುತ ಹೋರಾಟಕ್ಕೆ ಸರ್ಕಾರದ ಯಾವುದೇ ಪ್ರಾತಿನಿಧ್ಯ ಗಮನಹರಿಸದೇ ಇರುವುದನ್ನು ಪ್ರತಿಭಟಿಸಿ, ಎರಡನೇ ಹಂತದ ಹೋರಾಟವಾಗಿ ಕರನಿರಾಕರಣೆ. ಆಫೀಸುಗಳ ಮುಂದೆ ಪಿಕೆಟಿಂಗ್ ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳುವವರಿದ್ದಾರೆ. ಮೂರನೆಯ ಹಾಗೂ ಕೊನೆಯ ಹಂತದ ಹೋರಾಟವಾಗಿ ಮುಂಬರುವ ಲೋಕಸಭಾ ಚುನಾವಣೆಗಳನ್ನು ಬಹಿಷ್ಕರಿಸುವುದು. ಕಾರಣ ಈ ಭಾಗದ ಪ್ರತಿನಿಧಿಯಾಗಿ ಜನರ ನ್ಯಾಯಯುತ ಹೋರಾಟ ಮನ್ನಿಸುವುದು ಸರ್ಕಾರದ ಅದ್ಯ ಕರ್ತವ್ಯವಾಗಿದೆ ಎಂದು ನೆನಪಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುವುದೇನೆಂದರೆ, ಗದ್ದಿಗೌಡರ ಸಮಿತಿಯ ವರದಿ ಸಂಪೂರ್ಣವಾಗಿ ಜಾರಿಗೆ ಬರಬೇಕು. ಅದರಲ್ಲಿ ಯಾವುದೇ ಹೆಚ್ಚು ಕಡಿಮೆ ಆಗಕೂಡದು. ಎರಡನೆಯದಾಗಿ, ಮೊದಲ ಕಂತಿನಲ್ಲೇ ಇತರ ಜಿಲ್ಲೆಗಳ ಜೊತೆಗೆ ಕೊಪ್ಪಳ ಜಿಲ್ಲೆ ಅಸ್ತಿತ್ವದಲ್ಲಿ ಬರಬೇಕು. ಇಷ್ಟು ಭರವಸೆಯನ್ನು ಸರ್ಕಾರ ನೀಡುವುದಾದರೆ, ಜಿಲ್ಲಾ ರಚನಾ ಸಮಿತಿಯವರು ನಡೆಸಿರುವ ಉಪವಾಸ ಸತ್ಯಾಗ್ರಹ ಮುಂತಾದ ವಿಧಾನಗಳನ್ನು ಕೈಬಿಡಲು ಮನವೊಲಿಸುವ ಪ್ರಯತ್ನ ಮಾಡುವುದಾಗಿ ಹೇಳುತ್ತಾ, ಈ ಬಗ್ಗೆ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗಾಗಲೇ ಸ್ಪಷ್ಟಪಡಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಈ ವಿಷಯ ಸಾಕಷ್ಟು ಚರ್ಚೆ ನಡೆದು; ಅದಕ್ಕೆ ಸ್ಪಷ್ಟವಾದ ಸ್ಟೇಟ್‌ಮೆಂಟ್ ಮಾಡಲಾಗಿದೆ.

ಶ್ರೀ ಬಿ. ಮಲ್ಲಿಕಾರ್ಜುನ ಡಿವಟರ್ : ತಾವು ಈಗ ಕೊಟ್ಟಿರತಕ್ಕ ಲಿಖಿತ ಉತ್ತರವೂ ನನಗೆ ಬಂದಿದೆ.

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ. ಮರಿಯಪ್ಪನವರು ದಿನಾಂಕ 19.2.1919ರಂದು ಮಾನ್ಯ ಕಾರ್ಯದರ್ಶಿ ಮತ್ತು ಆಯುಕ್ತರು - 2 ಇವರಿಗೆ ಕೊಪ್ಪಳ ತಾಲ್ಲೂಕಿಗೆ ಸಂಬಂಧಪಟ್ಟ ಗ್ರಾಮಸ್ಥರು ಕೊಟ್ಟಿರುವ ಮನವಿಯನ್ನು ಸಲ್ಲಿಸಿರುತ್ತಾರೆ. ಈ ಮನವಿಯಲ್ಲಿ ಜಿಲ್ಲಾ ಕೇಂದ್ರವಾಗಲಿರುವ ಕೊಪ್ಪಳ ನಗರವು ಐತಿಹಾಸಿಕ, ಪೌರಾಣಿಕ, ಸ್ವತಂತ್ರ ಹೋರಾಟದಲ್ಲಿ ಅಗ್ರಸ್ಥಾನ ಪಡೆದಿದ್ದು, ರೈಲ್ವೆ ಸ್ಟೇಷನ್, ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ಸಂಪರ್ಕ ಹೊಂದಿರುವುದಲ್ಲದೆ ಅನೇಕ ವಿಸ್ತರಿಸಬೇಕಾದ ಕಛೇರಿಗಳಿಗೆ ಹಾಗೂ ವಸತಿಗಳಿಗಾಗಿ ಭೂಮಿ ಲಭ್ಯವಿರುತ್ತದೆಂದು ತಿಳಿಸಿ ಜಿಲ್ಲಾ ಕೇಂದ್ರ ರಾಯಚೂರು ಜಿಲ್ಲೆಯ ನಗರಗಳು ಅತಿ ದೂರವಾಗಿದ್ದು

ಎಲ್ಲಾ ರೀತಿಯ ತೊಂದರೆ ಅನುಭವಿಸುತ್ತಿದ್ದೇವೆ ಎಂಬ ಅಂಶವನ್ನು ಶೃತಪಡಿಸಿ ಕೊಪ್ಪಳ ತಾಲ್ಲೂಕು ಎಲ್ಲಾ ರೀತಿಯಲ್ಲಿ ಜಿಲ್ಲಾ ಕೇಂದ್ರವಾಗಲಿಕ್ಕೆ ಯೋಗ್ಯ ಪ್ರದೇಶವೆಂದು ವಿಷದಪಡಿಸಿರುತ್ತಾರೆ.

2. ಈ ಸಂಬಂಧ ಕೊಪ್ಪಳದಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವುದು ನಿಜವೆಂದು ತಿಳಿದುಬಂದಿರುತ್ತದೆ.

3. ಕೊಪ್ಪಳ ತಾಲ್ಲೂಕನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಲು ಕೊಪ್ಪಳ ಜಿಲ್ಲಾ ಹೋರಾಟ ಸಮಿತಿಯು ಹೋರಾಟವನ್ನು ನಡೆಸುತ್ತಿದ್ದಾರೆ.

4. ಈ ಹೋರಾಟಗಾರರು ಯಾವ ರೀತಿಯ ಉಗ್ರಕ್ರಮವನ್ನು ಈವರೆಗೂ ತೆಗೆದುಕೊಂಡಿಲ್ಲವೆಂದು ತಿಳಿದುಬಂದಿದೆ. ಇವರು ಜಿಲ್ಲಾಧಿಕಾರಿಯವರಿಗೆ ಜ್ಞಾಪನ ಪತ್ರವನ್ನು ಸಹ ಸಲ್ಲಿಸಿರುತ್ತಾರೆ.

5. ಕೊಪ್ಪಳ ತಾಲ್ಲೂಕನ್ನು ಜಿಲ್ಲೆಯನ್ನಾಗಿ ಮಾಡಲು ಶ್ರೀ ಗಡ್ಡೀಗೌಡರ ಸಮಿತಿಯು ಶಿಫಾರಸ್ಸು ಮಾಡಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ. 1991ರ ಜನಗಣತಿ ಕಾರ್ಯ ಮುಗಿದ ನಂತರ ಈ ವಿಷಯವನ್ನು ಪರಿಶೀಲಿಸಿಲಾಗುವುದು.

19) **ಕೃಷ್ಣರಾಜಪೇಟೆಯಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಕಟ್ಟಡದ ಬಗ್ಗೆ.**

ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಕೃಷ್ಣರಾಜಪೇಟೆಯಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಪ್ರಾರಂಭವಾಗಿ ಸುಮಾರು ಇಪ್ಪತ್ತು ವರ್ಷಗಳಾಗಿದೆ. ಆದರೂ ಈ ನ್ಯಾಯಾಲಯ ತನ್ನದೇ ಆದ ಒಂದು ಸ್ವಂತ ಕಟ್ಟಡವನ್ನು ಈವರೆಗೂ ಹೊಂದಿರುವುದಿಲ್ಲ. ನ್ಯಾಯಾಲಯ ಕಾರ್ಯನಿರ್ವಹಿಸುತ್ತಿರುವ ಈ ಜಾಗ ತುಂಬಾ ಗದ್ದಲಗಳಿಂದ ಕೂಡಿದ್ದು, ನೆಮ್ಮದಿಯ ವಾತಾವರಣವನ್ನು ಕಳೆದುಕೊಂಡಿರುತ್ತದೆ. ಕಾರಣ ನ್ಯಾಯಾಲಯಕ್ಕೆ ಹೊಂದಿಕೊಂಡಂತೆಯೇ ಇರುವ ಖಾಲಿ ಜಾಗ, ಖಾಸಗೀ ವಾಹನಗಳ ಆಟೋರಿಕ್ಷಾಗಳ ಮತ್ತು ಪೆಟ್ಟಿ ಅಂಗಡಿಗಳಿಂದ ತುಂಬಿದ್ದು, ವಾಹನಗಳಿಂದ ಹೊರಡುವ ಕರ್ಕಶ ಶಬ್ದ ವಿವಿಧ ಜಾಹಿರಾತುಗಳ ಪ್ರಚಾರ ಅರ್ಭಟ ಸದಾ ತುಂಬಿ ತುಳುಕುವ ಜನಸಂದಣಿಯಿಂದಾಗಿ ಪ್ರಶಾಂತವಾದ ಸ್ಥಳದಲ್ಲಿ ಕಾರ್ಯನಿರ್ವಹಿಸಬೇಕಾಗಿದ್ದ ನ್ಯಾಯಾಲಯ ನೆಮ್ಮದಿಯನ್ನು ಕಳೆದುಕೊಂಡು ತನ್ನ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬರುತ್ತಿದೆ. ಕಟ್ಟಡ ನಿರ್ಮಾಣಕ್ಕಾಗಿ ಸುಮಾರು ಮೂವತ್ತೈದು ಲಕ್ಷ ರೂಪಾಯಿಗಳ ಅಂದಾಜು ತಯಾರಾಗಿದ್ದು ಪ್ರತಿವರ್ಷವೂ ಸಾಕಷ್ಟು ಹಣ ಬಿಡುಗಡೆಯಾಗದೇ ಅಂದಾಜು ಅಂದಾಜಾಗಿಯೇ ಉಳಿದುಕೊಂಡು ಬರುತ್ತಿದೆ. ಈ ವರ್ಷದ ಆಯವ್ಯಯದಲ್ಲಿಯೂ ಕೂಡ ಸುಮಾರು 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದು, ಮೂರನೇ ಒಂದು ಭಾಗಕ್ಕಿಂತ ಒದಗಿಸಿರುವ ಹಣ ಕಡಿಮೆಯಾಗಿದ್ದು, ಆಡಳಿತಾತ್ಮಕ ಮಂಜೂರಾತಿ 1991-92ನೇ ಸಾಲಿನಲ್ಲಿಯೂ ದೊರಕದೇ ನ್ಯಾಯಲಯ ಕಟ್ಟಡ ಕೆಲಸ ಪ್ರಾರಂಭವಾಗುವಂತಿಲ್ಲ. ಆದಕಾರಣ ಮಂತ್ರಿಗಳು ನ್ಯಾಯಾಲಯಕ್ಕೆ ಅತಿ ಅಗತ್ಯವಾಗಿ ಬೇಕಾಗಿರುವ ಕಟ್ಟಡದ ಅವಶ್ಯಕತೆಯನ್ನು ಮನಗಂಡು ಸಾಕಷ್ಟು ಹಣ ಬಿಡುಗಡೆಯಾಗದಿದ್ದರೂ, ಈಗ ಒದಗಿಸಿರುವ ಹಣದಿಂದಲೇ ಕೆಲಸವನ್ನು ಪ್ರಾರಂಭಿಸುವುದಕ್ಕೆ ಅನುಕೂಲವಾಗುವಂತೆ, ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವುದರ ಮೂಲಕ ನ್ಯಾಯಾಲಯದ ಕಟ್ಟಡದ ಕೆಲಸ ಪ್ರಾರಂಭಿಸಲು ಅಗತ್ಯ ಕ್ರಮಕೈಗೊಳ್ಳಬೇಕೆಂದು ತಮ್ಮ ಮೂಲಕ ನಿವೇದಿಸಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ,